# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಚಿಕ್ಕಬಳ್ಳಾಪುರ

## SC CRIMINAL : 60/2020

**ಪ್ರಾ.ಸಾ. 15**

**ದೋ.ಸಾ. 25**

| | | |
|---|---|---|
| ಸಾಕ್ಷಿಯ ಹೆಸರು | : | ಬಾಬಾಜಾನ್ |
| ತಂದೆಯ ಹೆಸರು | : | ಬಾಷ |
| ವಯಸ್ಸು | : | 40 ವರ್ಷ |
| ಉದ್ಯೋಗ | : | ಅಂಗಡಿ ಕೆಲಸ |
| ವಾಸ | : | ತೊಂಡೇಬಾವಿ ಗ್ರಾಮ, ಗೌರಿಬಿದನೂರು ತಾಲ್ಲೂಕು |

**ದಿನಾಂಕ 27.01.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**
**ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

1). ನನ್ನ ಅಂಗಡಿಯಾದ ಬಾಷ ಸ್ಟೋರ್ ತೊಂಡೇಬಾವಿ ಗ್ರಾಮದ ರೈಲ್ವೇ ಸ್ಟೇಷನ್ ಬಳಿ ಮಂಚೇನಹಳ್ಳಿ ಮುಖ್ಯ ರಸ್ತೆಯಲ್ಲಿ ಇತ್ತು. ಈಗ ಸದರಿ ಅಂಗಡಿಯನ್ನು ಖಾಲಿ ಮಾಡಿಕೊಂಡು ಹೋಗಿರುತ್ತೇನೆ. ಮೃತ ರಾಧ ನನಗೆ ಗೊತ್ತಿಲ್ಲ. ಚಾಸಾ−1 ರಿಂದ 24 ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವ ಆರೋಪಿ ನನಗೆ ಗೊತ್ತಿಲ್ಲ. ಈಗ ಸಾಕ್ಷಿಗೆ ನಿಪಿ−18 ನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ಸಹಿಯನ್ನು ನಿಪಿ−18(ಡಿ) ಎಂದು ಗುರುತಿಸಲಾಯಿತು. ನಿಪಿ−18 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ, ಖಾಲಿ ಪೇಪರಿಗೆ ನಾನು ಸಹಿ ಮಾಡಿರುತ್ತೇನೆ. ನಮ್ಮ ಅಂಗಡಿಯಲ್ಲಿ ಅಕ್ಕಿ, ಬೇಳೆ ಹಾಗೂ ದಿನಸಿ ವಸ್ತುಗಳನ್ನು ಮಾತ್ರ ಮಾರಾಟ ಮಾಡುತ್ತೇನೆ. ನಮ್ಮ ಅಂಗಡಿಯಲ್ಲಿ ನಾವು ಇಲಿ ಪಾಶಾಣವನ್ನು ಮಾರಾಟ ಮಾಡುವುದಿಲ್ಲ. ನಾನು ಆರೋಪಿ ಅಥವಾ ಅವರ ತಮ್ಮನಿಗೆ ಇಲಿ ಪಾಶಾಣವನ್ನು ಮಾರಾಟ ಮಾಡಿರುವುದಿಲ್ಲ. ನಾನು ಪೊಲೀಸರಿಗೆ

ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಪೊಲೀಸರು ಆರೋಪಿಯನ್ನು ನನ್ನ ಅಂಗಡಿಗೆ ಕರೆದುಕೊಂಡು ಬಂದಿರುವುದಿಲ್ಲ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಮಾನ್ಯ ಅಭಿಯೋಜಕರು ಅನುಮತಿಯನ್ನು ಕೇಳುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ಗಮನಿಸಿ ಅನುಮತಿ ನೀಡಲಾಯಿತು.)**

**ಪಾಟೀಸವಾಲುಃ ಸರ್ಕಾರಿ ಅಭಿಯೋಜಕರಿಂದಃ**

2). ದಿಃ16-01-2020 ರಂದು ನಾನು ನಮ್ಮ ಅಂಗಡಿಯಲ್ಲಿ ಇರುವಾಗ ಸುಮಾರು 11.00 ಗಂಟೆಯ ಸಮಯದಲ್ಲಿ ಸಿಪಿಐ ಗೌರಿಬಿದನೂರುರವರು ನಮ್ಮ ಅಂಗಡಿಗೆ ಆರೋಪಿಯ ತಮ್ಮ ಪುರುಷೊತ್ತಮನೊಂದಿಗೆ ಬಂದಿರುತ್ತಾರೆ ಎಂದರೆ ಸರಿಯಲ್ಲ. ನಂತರ ಪುರುಷೊತ್ತಮ್ಮನು ನಮ್ಮ ಅಂಗಡಿಯನ್ನು ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ಸಿಪಿಐ ಸಾಹೇಬರು ನನ್ನನ್ನು ಕುರಿತು ಪುರುಷೊತ್ತಮನನ್ನು ನೋಡಿದ್ದೀಯಾ ಎಂದು ಕೇಳಿದರು, ಆಗ ನಾನು ಪುರುಷೋತ್ತಮನನ್ನು ಗುರುತಿಸಿ, ಈತನನ್ನು ನಾನು ನೋಡಿದ್ದೇನೆ, ಹಾಗೂ ಈತನು ಕಮಲಾಪುರ ಗ್ರಾಮದವನಾಗಿದ್ದು, ಆಗಾಗ ನಮ್ಮ ಅಂಗಡಿಗೆ ವ್ಯಾಪಾರಕ್ಕಾಗಿ ಬರುತ್ತಿರುತ್ತಾನೆ ಹಾಗೂ ದಿಃ06-01-2020 ರಂದು ರಾತ್ರಿ ಈತನ ಅಣ್ಣ ವೆಂಕಟೇಶನು ಬಂದು ಒಂದು ಇಲಿ ಔಷಧಿ ಡಬ್ಬಿಯನ್ನು ತೆಗೆದುಕೊಂಡು ಹೋಗಿದ್ದು, ನಂತರ ರಾತ್ರಿ 8.30 ಗಂಟೆಯ ಸಮಯದಲ್ಲಿ ಪುರುಷೊತ್ತಮ ಬಂದು ಒಂದು ಇಲಿ ಔಷಧಿಯನ್ನು ಕೇಳಿದ್ದು, ನಾನು ಅವನಿಗೂ ಸಹ ಇಲಿ ಔಷಧಿಯ ಡಬ್ಬಿಯನ್ನು ಮಾರಾಟ ಮಾಡಿರುತ್ತೇನೆ ಎಂದು ತಿಳಿಸಿರುತ್ತೇನೆ ಎಂದು ಪೊಲೀಸರಿಗೆ ತಿಳಿಸಿರುತ್ತೇನೆ ಎಂದರೆ ಸರಿಯಲ್ಲ. ನಂತರ ಪೊಲೀಸರು ನಮ್ಮ ಅಂಗಡಿಯ ಬಳಿ ನಿಪಿ-18 ರಂತೆ ಮಹಜರನ್ನು ಬೆಳಿಗ್ಗೆ 11.00 ರಿಂದ 11.40 ಗಂಟೆವರೆಗೆ ನನ್ನ ಅಂಗಡಿಯ ಮುಂದೆ ಬರೆದು ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ.

3). ನಂತರ ನನಗೆ ವಿಚಾರ ತಿಳಿಯಲಾಗಿ ದಿನಾಂಕಃ06.01.2020 ರಂದು ರಾತ್ರಿ ಪುರುಷೋತ್ತಮನ ಅಣ್ಣ ವೆಂಕಟೇಶ್ ನಮ್ಮ ಅಂಗಡಿಗೆ ಬಂದು ಒಂದು ಇಲಿ ಪಾಶಾಣದ ಡಬ್ಬಿಯನ್ನು ತೆಗೆದುಕೊಂಡು ಹೋಗಿ, ವೆಂಕಟೇಶ್ ಪ್ರೀತಿಸುತ್ತಿದ್ದ ಕುಮಾರಿ ರಾಧರವರಿಗೆ ವೆಂಕಟೇಶನು ಒಂದು ಸಿಮ್‌ನ್ನು ಕೊಡಿಸಿದ್ದು, ಆ ಫೋನಿಗೆ ಕರೆ ಮಾಡಿ ಮಾತನಾಡುತ್ತಿರುತ್ತಾನೆ. ಕೆಲವು ದಿನಗಳ ನಂತರ ಕುಮಾರಿ ರಾಧಳಿಗೆ ವೆಂಕಟೇಶನು ಫೋನ್ ಮಾಡಿದಾಗ ರಾಧಾಳ ಮೊಬೈಲ್ ನಂಬರ್ ಬ್ಯುಸಿ ಬರುತ್ತಿದ್ದರಿಂದ ರಾಧಾಳ ಮೇಲೆ ವೆಂಕಟೇಶನಿಗೆ ಅನುಮಾನ ಬಂದಿರುತ್ತದೆ. ಫೋನ್ ಮತ್ತು ಸಿಮ್ ನ್ನು ನಾನು ಕೊಟ್ಟಿದ್ದು, ಬೇರೆ ಯಾರಿಗೂ ಫೋನ್ ನಂಬರನ್ನು ನಾನು ಕೊಟ್ಟಿರುವುದಿಲ್ಲ. ಕುಮಾರಿ ರಾಧ ಅವನನ್ನು ಪ್ರೀತಿಸುತ್ತಿದ್ದು, ರಾಧಾಳನ್ನು ಪುಸಲಾಯಿಸಿ ಇಲಿ ಪಾಶಾಣವನ್ನು ಕುಡಿಯಿಸಿದ್ದು, ನಂತರ ವೆಂಕಟೇಶನು ಸಹ ಇಲಿ ಪಾಶಾಣವನ್ನು ಕುಡಿದಂತೆ ನಟಿಸಿ ಗ್ರಾಮದಲ್ಲಿನ ಜನರಿಗೆ ಪ್ರೇಮಿಗಳು ಇಬ್ಬರು ಸೇರಿ ಇಲಿ ಪಾಶಾಣವನ್ನು ಕುಡಿದು ಸಾಯಲು ಪ್ರಯತ್ನಿಸಿದ್ದಾರೆ ಎಂದು ನಂಬಿಸಿ, ಅವನು ತಮ್ಮ ಪುರುಷೊತ್ತಮ್ಮನಿಂದ ಇನ್ನೊಂದು ಇಲಿ ಔಷಧಿಯ ಡಬ್ಬಿಯನ್ನು ತೆರಯಿಸಿಕೊಂಡು, ಸದರಿ ಇಲಿ ಔಷಧಿಯನ್ನು ಮೂತಿಗೆ ಸವರಿಕೊಂಡು, ಉಳಿದ ಇಲಿ ಔಷಧಿಯನ್ನು ಮತ್ತು ಡಬ್ಬಿಯನ್ನು ಕಮಲಾಪುರ ಗ್ರಾಮದ ಪಕ್ಕದಲ್ಲಿ ಬಿಸಾಡಿರುತ್ತಾನೆ ಎಂದರೆ ಸರಿಯಲ್ಲ. ಇಲಿ ಪಾಶಾಣವನ್ನು ಕುಡಿದಿದ್ದ ರಾಧಾಳು ಗೌರಿಬಿದನೂರು ಆಸ್ಪತ್ರೆಗೆ ದಾಖಲಾಗಿ, ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆಯನ್ನು ಕೊಡಿಸುತ್ತಿದ್ದಾಗ, ಚಿಕಿತ್ಸೆ ಫಲಕಾರಿಯಾಗದೇ ದಿನಾಂಕಃ08-01-2020 ರಂದು ರಾತ್ರಿ 10.15 ಗಂಟೆ ಸಮಯದಲ್ಲಿ ಮೃತಪಟ್ಟಿರುತ್ತಾಳೆ ಎಂದು ತಿಳಿಯಿತು ಎಂದರೆ ಸರಿಯಲ್ಲ. ಈ ಬಗ್ಗೆ ನಾನು ಪೊಲೀಸರಿಗೆ ವಿವರವಾಗಿ ನಿಪಿ-24 ರಂತೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ

ಸರಿಯಲ್ಲ. ಎಲ್ಲಾ ವಿಚಾರಗಳು ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀಸವಾಲುಃ ಆರೋಪಿ ಪರ ಶ್ರೀ ಕೆ.ಎಸ್.ಎನ್ ವಕೀಲರಿಂದಃ ಇಲ್ಲ.**

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.
Sd/-
**(ಎನ್.ವಿ. ಭವಾನಿ)**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಬಳ್ಳಾಪುರ.